ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	917
ವಿಧಾನ ಪರಿಷತ್ತಿನ ಸದಸ್ಯರ ಹೆಸರು	:	ಶ್ರೀ.ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ	:	13.03.2020
ಉತ್ತರಿಸುವ ಸಚಿವರು	::	ಪಶುಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	ಪಶುಸಂಗೋಪನೆ ಇಲಾಖೆಯಲ್ಲಿ ಕೆಲಸ ನಿರ್ವಹಿಸಬೇಕಾದ ವೈದ್ಯಾಧಿಕಾರಿಗಳು ಅನ್ಯ ಇಲಾಖೇಯಲ್ಲಿ ನಿಯೋಜನೆ ಅಥವಾ ಕಾರ್ಯಭಾರದ ಮೇಲೆ (ಓಓಡಿ) ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು; (ಪೂರ್ಣ ಮಾಹಿತಿ ಒದಗಿಸುವುದು)	ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ 105 ಪಶುವೈದ್ಯರು ನಿಯೋಜನೆ ಮೇರೆಗೆ ಈ ಕೆಳಕಂಡ ಇಲಾಖೆಗಳಲ್ಲಿ ಇಲಾಖೆಯ ಚಟುವಟಿಕೆಗೆ ಪೂರಕವಾಗಿರುವ ಸಂಸ್ಥೆಗಳಲ್ಲಿ ಮಾತ್ರ ಪಶುವೈದ್ಯರುಗಳನ್ನು ನಿಯೋಜಿಸಲಾಗಿದೆ.

ಕ್ರ. ಸಂ	ಸಂಸ್ಥೆ	ನಿಯೋಜನೆಯಲ್ಲಿರುವ ಹುದ್ದೆಗಳ ಸಂಖ್ಯೆ
1.	ಪಶುವೈದ್ಯಕೀಯ ಕಾಲೇಜು	30
2.	ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ, ಬೆಂಗಳೂರು	22
3.	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು	17
4.	ತಾವರೆಕೊಪ್ಪ, ಹುಲಿ ಮತ್ತು ಸಿಂಹಧಾಮ ಶಿವಮೊಗ್ಗ	01
5.	ಚಾಮರಾಜೇಂದ್ರ ಮೃಗಾಲಯ, ಮೈಸೂರು	03
6.	ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬನ್ನೇರುಘಟ್ಟ	02
7.	ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ	18
8.	ಕರ್ನಾಟಕ ಕುಕ್ಕುಟ ಮಹಾಮಂಡಳ	05
9.	ಕರ್ನಾಟಕ ಪಶುವೈದ್ಯಕೀಯ ಪರಿಷತ್ತು	03
10.	ಮಹಾನಗರ ಪಾಲಿಕೆ ಶಿವಮೊಗ್ಗ	03
11.	ಔಷಧ ನಿಯಂತ್ರಣ ಇಲಾಖೆ ಬೆಂಗಳೂರು	01
	ಒಟ್ಟು:	105

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಆ)	ಅನ್ಯ ಇಲಾಖೆಗಳಲ್ಲಿ ನಿಯೋಜನೆ/ ಅನ್ಯ ಕಾರ್ಯಭಾರದ ಮೇಲೆ ಕೆಲಸ ನಿರ್ವಹಿಸಬಾರದೆಂದು ಆದೇಶವಿದ್ದರೂ ಸಹ ಬೇರೆ ಇಲಾಖೆಗಳ ಹುದ್ದೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು

ಇ)	ಇವರುಗಳನ್ನು ಸರ್ಕಾರದ ನಿಯಾಮಳಯ ಪ್ರಕಾರ ಹಿಂಪಡೆಯಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು; ಈ ಕುರಿತು ಇರುವ ಸರ್ಕಾರದ ನಿಯಮಾವಳಿಯ ಪ್ರತಿಯನ್ನು ಒದಗಿಸುವುದು?	ಈ ಇಲಾಖೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳಿಗೆ ನಿಯೋಜನೆ ಮೇರೆಗೆ ಕಾರ್ಯ ನಿರ್ವಹಣಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅಧಿಕಾರಿಗಳ ನಿಯೋಜನೆಯನ್ನು ರದ್ದುಪಡಿಸಿ ಇಲಾಖೆಗೆ ಹಿಂಪಡೆಯಲಾಗಿದೆ ಹಾಗೂ 05 ವರ್ಷಗಳಿಗಿಂತ ಅಧಿಕವಾಗಿ ಅನ್ಯಸೇವಾ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವವರನ್ನು ಸಹಾ ಹಿಂಪಡೆಯಲು ಕ್ರಮವಹಿಸಲಾಗುತ್ತಿದೆ. ಈ ಬಗ್ಗೆ ಕರ್ನಾಟಕ ನಾಗರೀಕ ಸೇವಾ ನಿಯಮ 1958 ರ ನಿಯಮ 419(ಬಿ) ರ ಪ್ರತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಸಂಖ್ಯೆ: ಪಸಂಮೀ ಇ-44 ಪಸಸೇ 2020

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು

ಮುಂಚಿತವಾಗಿ ನೇಮಿತನಾಗಿದ್ದ ಸರ್ಕಾರವು ಅವನನ್ನು ಆ ಬೇರೊಂದು ಸರ್ಕಾರವು ಅಂತಿಮವಾಗಿ ವಿಲೀನಗೊಳಿಸುವವರೆಗೆ ಅವನ ಹುದ್ದೆ ಹಕ್ಕನ್ನು ಇರಿಸಿರಲು ಒಪ್ಪಿರಬೇಕು.

*417. (1) ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಡಿಯಲ್ಲಿ ಸೇವೆ ಸಲ್ಲಿಸಲಾದ ಖಾಯಂ ಮತ್ತು ತಾತ್ಕಾಲಿಕ ಸರ್ಕಾರಿ ನೌಕರರಿಗೆ ಸಂಬಂಧಿಸಿದಂತೆ ರಜಾ ಸಂಬಳ ಮತ್ತು ನಿವೃತ್ತಿವೇತನದ ವೆಚ್ಚಗಳಿಂದಾಗಿ ಉಂಟಾಗುವ ಹೊಣೆಗಾರಿಕೆಯನ್ನು ಹಂಚಿಕೆ ಮಾಡುವ ವಿಧಾನವು ಈ ಕೆಳಗೆ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು.

(ಎ) ರಜಾ ಸಂಬಳದ ಹೊಣೆಗಾರಿಕೆಯನ್ನು ಸರ್ಕಾರಿ ನೌಕರನು ರಜೆಯ ಮೇಲೆ ತೆರಳುವ ಇಲಾಖೆಯು ಅದು ಅವನ ಮಾತೃ ಇಲಾಖೆಯಾಗಿರಲಿ ಅಥವಾ ಪ್ರತಿನಿಯೋಜನೆಯ ಮೇಲೆ ಹೋಗಿರುವ ಎರವಲು ಇಲಾಖೆಯಾಗಿರಲಿ ಪೂರ್ಣವಾಗಿ ವಹಿಸಿಕೊಳ್ಳತಕ್ಕದ್ದು.

(ಬಿ) ಉಪದಾನವೂ ಸೇರಿದಂತೆ ನಿವೃತ್ತಿ ವೇತನದ ಹೊಣೆಗಾರಿಕೆಯನ್ನು ನಿವೃತ್ತಿಯ ಕಾಲದಲ್ಲಿ ಸರ್ಕಾರಿ ನೌಕರನು, ಕೇಂದ್ರ, ರಾಜ್ಯ ಸರ್ಕಾರದ ಖಾಯಂ ನೌಕರನಾಗಿದ್ದನೋ ಆ ಸರ್ಕಾರವು ಪೂರ್ಣವಾಗಿ ವಹಿಸಿಕೊಳ್ಳತಕ್ಕದ್ದು.

(ಸಿ) ಸರ್ಕಾರಿ ವಂತಿಗೆಗಳ ಹೊಣೆಗಾರಿಕೆಯನ್ನು ಕೇಂದ್ರ ಅಥವಾ ರಾಜ್ಯ ಸರ್ಕಾರದ ಮಾತೃ ಇಲಾಖೆಯು ವಹಿಸಿಕೊಳ್ಳತಕ್ಕದ್ದು.

(2) ಸಂಯೋಜಿತ ಸೇವೆಯ ಸೌಲಭ್ಯವನ್ನು ಕ್ಲೇಮು ಮಾಡುವ ಸರ್ಕಾರಿ ನೌಕರನನ್ನು ಈ ಮುಂದಿನಂತೆ ವರ್ಗೀಕರಿಸತಕ್ಕದ್ದು.

(i) ಕೇಂದ್ರ/ರಾಜ್ಯ ಸರ್ಕಾರದ ಸೇವೆಯಿಂದ ತೆಗೆದುಹಾಕಿದವರಾಗಿದ್ದು ಮುಂದೆ ಅವರೇ ರಾಜ್ಯ / ಕೇಂದ್ರ ಸರ್ಕಾರದ ಸೇವೆಯಲ್ಲಿ ನಿಯೋಜಿತರಾದರೆ ನಿವೃತ್ತಿಯ ದಿನಾಂಕ ಮತ್ತು ಹೊಸ ನೇಮಕಾತಿಯ ದಿನಾಂಕದ ನಡುವೆ ಯಾವುದೇ ಸೇವಾ ತಡೆಯಿದ್ದು / ತಡೆ ಇಲ್ಲದೆ ಸೇವೆ ಸಲ್ಲಿಸಿದವರು.

(ii) ಕೇಂದ್ರ / ರಾಜ್ಯ ಸರ್ಕಾರದಡಿಯಲ್ಲಿ ತಾತ್ಕಾಲಿಕ ಹುದ್ದೆಯಲ್ಲಿ ಇರುವಾಗ, ಸಂಬಂಧಪಟ್ಟ ಆಡಳಿತಾತ್ಮಕ ಪ್ರಾಧಿಕಾರದ ಸೂಕ್ತ ಅನುಮತಿಪಡೆದು ಇಲಾಖಾ ಮುಖ್ಯಸ್ಥರ ಮೂಲಕ ರಾಜ್ಯ / ಕೇಂದ್ರ ಸರ್ಕಾರದ ಅಡಿಯಲ್ಲಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದವರು;

*ಸ.ಆ.ಸಂಖ್ಯೆ : ಎಫ್‌ಡಿ 10 ಎಸ್‌ಆರ್‌ಎ 2001 ದಿ: 10.10.2003ರ ಮೂಲಕ ಸೇರಿಸಲಾಗಿದೆ. (ದಿ. 17.10.2003 ರಿಂದ ಜಾರಿಗೆ ಬಂದಿದೆ)

(iii) ಕೇಂದ್ರ / ರಾಜ್ಯ ಸರ್ಕಾರದಡಿಯಲ್ಲಿ ತಾತ್ಕಾಲಿಕ ಹುದ್ದೆಗಳಲ್ಲಿರುವಾಗ ಸಂಬಂಧಪಟ್ಟ ಆಡಳಿತಾತ್ಮಕ ಪ್ರಾಧಿಕಾರದ ಅನುಮತಿ ಪಡೆಯದೆ ನೇರವಾಗಿ ರಾಜ್ಯ / ಕೇಂದ್ರ ಸರ್ಕಾರದಡಿಯಲ್ಲಿನ ಹುದ್ದೆಗಳಿಗಾಗಿ ಅರ್ಜಿ ಸಲ್ಲಿಸಿ ಕೇಂದ್ರ / ರಾಜ್ಯ ಸರ್ಕಾರದಡಿಯಲ್ಲಿನ ಹೊಸ ನೇಮಕಾತಿಗಳಿಗೆ / ಹುದ್ದೆಗಳಿಗೆ ಸೇರಲು ತಮ್ಮ ಹಿಂದಿನ ಹುದ್ದೆಗಳಿಗೆ ರಾಜೀನಾಮೆ ನೀಡಿರುವವರು.

(3) ಮೇಲ್ಕಂಡ (i) ಮತ್ತು (ii) ನೇ ಪ್ರವರ್ಗಗಳಲ್ಲಿರುವ ಸರ್ಕಾರಿ ನೌಕರರಿಗೆ ಸಂಯೋಜಿತ ಸೇವೆಯ ಸೌಲಭ್ಯವನ್ನು ಪಡೆಯಲು ಅನುಮತಿಸತಕ್ಕದ್ದು. (ii)ನೇ ಪ್ರವರ್ಗದ ಅಡಿಯಲ್ಲಿ ಬರುವ ನೌಕರನು ಹೊಸ ಹುದ್ದೆಗೆ ಸೇರುವುದಕ್ಕೆ ಮುಂಚೆ, ಆಡಳಿತಾತ್ಮಕ ಕಾರಣಗಳಿಗಾಗಿ, ತಾಂತ್ರಿಕ ಅಗತ್ಯತೆಗಳನ್ನು ಪೂರೈಸುವುದಕ್ಕಾಗಿ ಅವನು ಧಾರಣ ಮಾಡಿದ್ದ ತಾತ್ಕಾಲಿಕ ಹುದ್ದೆಗೆ ರಾಜೀನಾಮೆ ಸಲ್ಲಿಸುವಂತೆ ಅವನನ್ನು ಅಗತ್ಯಪಡಿಸಲಾಗುವಲ್ಲಿ ಅಂಥ ರಾಜೀನಾಮೆಯನ್ನು ಆಡಳಿತಾತ್ಮಕ ಕಾರಣಗಳಿಗಾಗಿ ನೀಡಲಾಗಿದೆಯೆಂದು ಮತ್ತು/ ಅಥವಾ ಸೂಕ್ತ ಅನುಮತಿ ಪಡೆದು ಹೊಸ ಹುದ್ದೆಗೆ ಸೇರಲು ತಾಂತ್ರಿಕ ಅಗತ್ಯತೆಗಳನ್ನು ಅಗತ್ಯಪಡಿಸಲಾಗಿರುವಲ್ಲಿ, ಅಂಥ ರಾಜೀನಾಮೆಯನ್ನು ಆಡಳಿತಾತ್ಮಕ ಕಾರಣಗಳಿಗಾಗಿ ನೀಡಲಾಗಿದೆಯೆಂದು ಮತ್ತು/ ಅಥವಾ ಸೂಕ್ತ ಅನುಮತಿ ಪಡೆದು ಹೊಸ ಹುದ್ದೆಗೆ ಸೇರಲು ತಾಂತ್ರಿಕ ಅಗತ್ಯತೆಗಳನ್ನು ಪೂರೈಸಲಾಗಿದೆಯೆಂದು ತಿಳಿಸುವ ಒಂದು ಪ್ರಮಾಣ ಪತ್ರವನ್ನು ರಾಜೀನಾಮೆ ಅಂಗೀಕರಿಸುವ ಪ್ರಾಧಿಕಾರವು ನೀಡಬೇಕು. ನಿವೃತ್ತಿ ಪಡೆಯುವ ಕಾಲಕ್ಕೆ ಅವನು ಈ ಸೌಲಭ್ಯವನ್ನು ಪಡೆಯಲು ಸಾಧ್ಯವಾಗುವಂತೆ ಮಾಡಲು ಅವನ ಸೇವಾ ಪುಸ್ತಕದಲ್ಲಿ ಸೂಕ್ತ ದೃಢೀಕರಣದ ಅಡಿಯಲ್ಲಿ ಈ ಪ್ರಮಾಣ ಪತ್ರದ ದಾಖಲನ್ನು ಸಹ ಮಾಡಬೇಕು (iii)ನೇ ಪ್ರವರ್ಗದ ಅಡಿಯಲ್ಲಿ ಬರುವ ಸರ್ಕಾರಿ ನೌಕರರು, ನಿವೃತ್ತಿವೇತನಕ್ಕೆ ಸಂಬಂಧಿಸಿದಂತೆ ಅವರು ಈ ಹಿಂದೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಲು ಹಕ್ಕು ಹೊಂದಿರುವುದಿಲ್ಲ.

418. ಈ ನಿಯಮಗಳ ಜಾರಿಯಲ್ಲಿ ಬರುವ ದಿನಾಂಕಕ್ಕೆ ಪೂರ್ವದಲ್ಲಿ ಅನ್ಯಸೇವೆಗೆ ವರ್ಗಾಯಿತರಾದ ಸರ್ಕಾರಿ ನೌಕರರ ಅನ್ಯಸೇವಾ ಪ್ರತಿನಿಯೋಜನೆಯ ಅವಧಿಗಳ ವಿಸ್ತರಣೆಯು, ಆ ದಿನಂಕದ ತರುವಾಯ ಮುಕ್ತಾಯವಾಗುತ್ತಿದ್ದರೆ, ಅವುಗಳನ್ನು ಹೊಸ ವರ್ಗಾವಣೆಯಿಂದ ಪರಿಗಣಿಸತಕ್ಕದ್ದು ಮತ್ತು ಈ ನಿಯಮಗಳ ಅನುಸಾರ ವ್ಯವಹರಿಸತಕ್ಕದ್ದು.

419. (ಎ) ಯಾವ ಸರ್ಕಾರಿ ನೌಕರನನ್ನು ಅವನ ಇಚ್ಛೆಗೆ ವಿರುದ್ಧ ಅನ್ಯಸೇವೆಗೆ ವರ್ಗಾಯಿಸತಕ್ಕದ್ದಲ್ಲ.

ಪರಂತು ಈ ಉಪನಿಯಮವು ಪೂರ್ಣವಾಗಿ ಅಥವಾ ಬಹುಮಟ್ಟಿಗೆ ಸರ್ಕಾರದ ಸ್ವಾಮ್ಯದಲ್ಲಿರುವ ಅಥವಾ ಅದರಿಂದ ನಿಯಂತ್ರಿಸುವ ನಿಗಮವಾದ ಅಥವಾ ನಿಗಮಿತವಾಗಿಲ್ಲದ ನಿಕಾಯದ ಸೇವೆಗೆ ವರ್ಗಾಯಿಸಿದ ಒಬ್ಬ ಸರ್ಕಾರಿ ನೌಕರನ ವರ್ಗಾವಣೆಗೆ ಅನ್ವಯಿಸತಕ್ಕದ್ದಲ್ಲ.

ಪರಂತು ಈ ಉಪನಿಯಮವು ಪೂರ್ಣವಾಗಿ ಭಾರತ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಅಥವಾ ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮದ ಮೇರೆಗೆ ನೋಂದಾಯಿತ ಸರ್ಕಾರಿ ಸಂಸ್ಥೆಯ ಸೇವೆಗೆ ವರ್ಗಾಯಿಸಿದ ಸರ್ಕಾರಿ ನೌಕರನ ವರ್ಗಾವಣೆಗೆ ಅನ್ವಯಿಸತಕ್ಕದ್ದಲ್ಲ.

(ಬಿ) 425ನೆಯ ನಿಯಮದ ಉಪಬಂಧಕ್ಕೊಳಪಟ್ಟು ಸಕ್ಷಮ ಅಧಿಕಾರವು ಅನ್ಯಸೇವೆಗೆ ವರ್ಗಾವಣೆಯನ್ನು ಮಂಜೂರು ಮಾಡಬಹುದು.

ಸರ್ಕಾರದ ವಿಶೇಷ ಆದೇಶಗಳಿದ್ದ ಹೊರತು ಅಂಥ ವರ್ಗಾವಣೆಯ ಅವಧಿಯು ಸಾಮಾನ್ಯವಾಗಿ ಐದು ವರ್ಷಗಳಿಗೆ ಮೀರತಕ್ಕದ್ದಲ್ಲ.

ಟಿಪ್ಪಣಿ 1 :– ಸರ್ಕಾರಿ ನೌಕರನನ್ನು ಅನ್ಯಸೇವೆಗೆ ವರ್ಗಾವಣೆ ಮಾಡಿದಾಗಲೆಲ್ಲ ಅಥವಾ ಸರ್ಕಾರಿ ನೌಕರನ ಅನ್ಯಸೇವೆಯ ಅವಧಿಯನ್ನು ವಿಸ್ತರಿಸಿದಾಗಲೆಲ್ಲ ಅನ್ಯಸೇವೆಗೆ ವರ್ಗಾವಣೆಯನ್ನು ಮಂಜೂರು ಮಾಡುವ ಸಕ್ಷಮ ಅಧಿಕಾರಿಗಳು, ಸಂದರ್ಭಾನುಸಾರ, ನಿವೃತ್ತಿವೇತನದ ಮತ್ತು ರಜಾ ವೇತನದ ಅಥವಾ ನಿವೃತ್ತಿವೇತನದ ಸಂಬಂಧದಲ್ಲಿ ಮಾತ್ರ ಅಂಶದಾನಗಳನ್ನು ಸರ್ಕಾರದ ಆದೇಶಗಳಿಗನುಸಾರವಾಗಿ ಕಾಲಕಾಲಕ್ಕೆ ಜಾರಿಯಲ್ಲಿರುವ ದರಗಳ ಪ್ರಕಾರವೇ ವಸೂಲು ಮಾಡಲಾಗುವುದೆಂದು ಸ್ಪಷ್ಟವಾಗಿ ತಿಳಿಸಬೇಕು.

ಟಿಪ್ಪಣಿ 2 : ಅನ್ಯಸೇವೆಗೆ ಸರ್ಕಾರಿ ನೌಕರನ ವರ್ಗಾವಣೆಯನ್ನು ಅಥವಾ ಅನ್ಯಸೇ[illegible] ಅವಧಿಯ ವಿಸ್ತರಣೆಯನ್ನು ಮಂಜೂರು ಮಡುವ ಆದೇಶಗಳ ಒಂದು ಪ್ರತಿಯನ್ನು ಯಾವ [illegible] ಕಾರಿಯು ಮಂಜೂರು ಮಾಡುತ್ತಾನೋ ಆ ಅಧಿಕಾರಿಗೆ ತನ್ನದೇ ಸಂಬಂಧಪಟ್ಟ ಸರ್ಕಾರಿ ನೌಕ[illegible] ವಿಳಂಬ ಮಾಡದೆ ತನ್ನ ವೇತನದ ಲೆಕ್ಕಪರಿಶೋಧನೆ ಮಾಡುವ ಅಧಿಕಾರಿಗೆ ತಾನೇ [illegible] ಪ್ರತಿಯನ್ನು ಕಳುಹಿಸತಕ್ಕದ್ದು ಮತ್ತು ತಾನು ಅಂಶದಾನದ ಬಗ್ಗೆ ಯಾವ ಅಧಿಕಾರಿಗೆ [illegible] ಕೊಡಬೇಕೆಂಬುದರ ಬಗ್ಗೆ ಅವನ ಸೂಚನೆಗಳು ತೆಗೆದುಕೊಳ್ಳತಕ್ಕದ್ದು. ಅನ್ಯ ಸೇವೆಗೆ ಹೋಗು[illegible] ಅನ್ಯಸೇವೆಯಿಂದ ಹಿಂದಿರುವಾಗ ಯಾವ ಪ್ರಭಾರದ ಬಗ್ಗೆ ಅವನು ಪಕ್ಷಕಾರನಾಗಿರುವನೋ [illegible] ಎಲ್ಲ ಪ್ರಭಾರದ ವರ್ಗಾವಣೆಯ ಕಾಲ ಮತ್ತು ದಿನಾಂಕವನ್ನು ತರುವಾಯ ಅಧಿಕಾರಿಗೆ [illegible] ಮಾಡತಕ್ಕದ್ದು ಮತ್ತು ಅನ್ಯಸೇವೆಯಲ್ಲಿ ಅವನ ವೇತನಕ್ಕೆ ಸಂಬಂಧಪಟ್ಟ ವಿವರಗಳು, [illegible] ತೆಗೆದುಕೊಂಡ ರಜೆ, ಅವನ ಅಂಚೆ ವಿಳಾಸ ಮತ್ತು ಆ ಅಧಿಕಾರಿಯು ಬಯಸುವ ಇತರ [illegible] ಮಾಹಿತಿಯನ್ನು ಕಾಲಕಾಲಕ್ಕೆ ಒದಗಿಸತಕ್ಕದ್ದು.

ಟಿಪ್ಪಣಿ 3 : ಅನ್ಯಸೇವೆಗೆ ವರ್ಗಾಯಿತನಾದ ಪ್ರತಿಯೊಬ್ಬ ಸರ್ಕಾರಿ ನೌಕರನು [illegible] ಸಂಬಂಧಪಟ್ಟ ನಿಯಮಗಳನ್ನು ಚೆನ್ನಾಗಿ ಅರಿತಿರಬೇಕು. ಅನ್ಯಸೇವೆಯಲ್ಲಿರುವಾಗ [illegible] ಮತ್ತು ಇತರ ಸೇವಾ ಷರತ್ತುಗಳನ್ನು ವಿನಿಮಯಗೊಳಿಸುವ ನಿಯಮಗಳನ್ನು ಮತ್ತು [illegible]

ಅನುಸರಿಸುವುದನ್ನು ಮತ್ತು ಅಂಶದಾನಗಳು ಯಾವುದಾದರೂ ಇದ್ದರೆ ಅವು ನಿಯಮಿತವಾಗಿ ಸಂದಾಯವಾಗಿರುವುದನ್ನು ಖಚಿತಪಡಿಸಿಕೊಳ್ಳಬೇಕು.

ಟಿಪ್ಪಣಿ 4 : ಅನ್ಯ ನಿಯೋಜಕರು ತಮ್ಮ ಸ್ವಂತ ಉದ್ಯೋಗಿಗಳಿಗಾಗಿ ಪ್ರಯಾಣ ಭತ್ಯದ ನಿಯಮಗಳನ್ನು ರಚಿಸಿದ್ದರೆ ಅಂಥ ಅನ್ಯ ನಿಯೋಜಕರಲ್ಲಿ ಸೇವೆಗಾಗಿ ವರ್ಗಾಯಿತರಾದ ಸರ್ಕಾರಿ ನೌಕರರ ಪ್ರಯಾಣ ಭತ್ಯವು ಅನ್ಯಸೇವೆಗೆ ವರ್ಗಾಯಿಸಿದ ಮತ್ತು ಅನ್ಯಸೇವೆಯಿಂದ ಹಿಂದಕ್ಕೆ ಬಂದಾಗ ಕೈಗೊಂಡ ಪ್ರಯಾಣಗಳ ಸಂಬಂಧದಲ್ಲಿ ಹಾಗೂ ಅನ್ಯ ನಿಯೋಜಕನ ವ್ಯವಹಾರಗಳ ಸಂಬಂಧದಲ್ಲಿ ಅನ್ಯ ಸೇವೆಯ ಕಾಲದಲ್ಲಿ ಕೈಗೊಂಡ ಪ್ರಯಾಣಗಳ ಸಂಬಂಧದಲ್ಲಿಯೂ ಸಂಬಂಧಪಟ್ಟ ಅನ್ಯ ನಿಯೋಜಕ ನಿಯಮಗಳಿಗೆ ಒಳಪಡತಕ್ಕದ್ದು. ಅನ್ಯ ನಿಯೋಜಕನು ಪ್ರಯಾಣಭತ್ಯಗಳಿಗೆ ಸಂಬಂಧಿಸಿದಂತೆ ಯಾವ ನಿಯಮಗಳನ್ನೂ ರಚಿಸದಿರುವಾಗ ಅಂಥ ಅನ್ಯ ಸೇವೆಗೆ ವರ್ಗಾಯಿತರಾದ ಸರ್ಕಾರಿ ನೌಕರರ ಪ್ರಯಾಣ ಭತ್ಯವನ್ನು ಕರ್ನಾಟಕ ಸರ್ಕಾರಿ ಸೇವಾ ನಿಯಮಗಳಲ್ಲಿರುವ ನಿಯಮಗಳ ಮೂಲಕ ವಿನಿಮಯಿಸತಕ್ಕದ್ದು.

ಟಿಪ್ಪಣಿ 5 : ಅನ್ಯಸೇವೆಗೆ ವರ್ಗಾವಣೆ ನಿಬಂಧನೆಯಲ್ಲಿ ಅನ್ಯಸೇವೆಯಲ್ಲಿರುವಾಗ ಅಥವಾ ಅನ್ಯಸೇವೆಯ ಕೊನೆಯಲ್ಲಿ ಸರ್ಕಾರಿ ನೌಕರನು ತೆಗೆದುಕೊಂಡ ರಜಾ ಅವಧಿಗಳ ಸಂಬಂಧದಲ್ಲಿ [illegible]ದೇ ಪರಿಹಾರ ಭತ್ಯದ (ತುಟ್ಟಿಭತ್ಯ ಇತ್ಯಾದಿ) ಸಂಬಂಧದಲ್ಲಿನ ವೆಚ್ಚವನ್ನು ಅನ್ಯ [illegible]ಜಕರು ವಹಿಸಿಕೊಳ್ಳತಕ್ಕದ್ದು ಎಂಬ ಷರತ್ತನ್ನು ಸೇರಿಸತಕ್ಕದ್ದು.

ರಜೆಯ ಮೇಲಿರುವಾಗ ಅನ್ಯಸೇವೆಗೆ ವರ್ಗಾಯಿತನಾಗಿರುವ ಸರ್ಕರಿನೌಕರನ [illegible]ದಲ್ಲಿ ಅಥವಾ ಸರ್ಕಾರಿ ನೌಕರನು ಸರ್ಕಾರಿ ಸೇವೆಯಿಂದ ಬಿಡುಗಡೆ ಹೊಂದಿದ [illegible] ಕೂಡಲೇ ಅನ್ಯನಿಯೋಜಕನ ಸೇವೆಗೆ ಸೇರುವುದಕ್ಕೆ ನಿಕಟಪೂರ್ವದಲ್ಲಿ ರಜೆಯನ್ನು [illegible]ಂಡರೆ ಅಂಥಾ ರಜಾ ಅವಧಿಗೆ ಸಂಬಂಧಿಸಿದ ಪರಿಹಾರ ಭತ್ಯದ ಸಂಬಂಧದಲ್ಲಿ ವೆಚ್ಚವನ್ನು [illegible] ವಹಿಸಿಕೊಳ್ಳುವುದು.

ಟಿಪ್ಪಣಿ 6 : ಇನ್ನು ಮುಂದೆ ಅನ್ಯಸೇವೆಗೆ ವರ್ಗಾವಣೆ ಮಾಡಿದ ಸರ್ಕಾರಿ ನೌಕರನ [illegible]ದಲ್ಲಿ ಅಥವಾ ಈಗಿರತಕ್ಕ ಅನ್ಯಸೇವಾ ಒಪ್ಪಂದಗಳ ನವೀಕರಣವಾದಾಗ [illegible]ಜಕನು ಅನ್ಯ ಸೇವೆಯಲ್ಲಿ ಮತ್ತು ಅದರ ಮೂಲಕ ಸಂಭವಿಸಿದ ಅಂಗವಿಕಲತೆಯ [illegible]ಗಿ ಮಂಜೂರು ಮಾಡಿದ ಅಂಗವಿಕಲತಾ ರಜೆಯ ಸಂಬಂಧದಲ್ಲಿ ಅಂಥ [illegible] ಅನ್ಯಸೇವೆಯು ಮುಕ್ತಾಯವಾದ ತರುವಾಯ ವ್ಯಕ್ತವಾಗಿದ್ದಾಗ್ಯೂ ರಜಾ [illegible] ಹೊಣೆಯನ್ನು ಒಪ್ಪಿಸಿಕೊಳ್ಳತಕ್ಕದ್ದು. ಅಂಥ ರಜೆಯ ಸಂಬಂಧದಲ್ಲಿ ರಜೆ [illegible]ನ್ನು ಅನ್ಯ ನಿಯೋಜಕನಿಂದ ನೇರವಾಗಿ ವಸೂಲು ಮಾಡತಕ್ಕದ್ದು. ಹಾಗೂ ಆ [illegible]ನ್ನು ಅನ್ಯಸೇವಾ ವರ್ಗಾವಣೆಯ ನಿಬಂಧನೆಗಳಲ್ಲಿ ಸೇರಿಸಬೇಕು.

[illegible] ಅನ್ಯಸೇವೆಯಲ್ಲಿರುವಾಗ ಸರ್ಕಾರಿ ನೌಕರನು ವಹಿಸಿದ ವೈದ್ಯಕೀಯ ವೆಚ್ಚಗಳ [illegible] ಸರ್ಕಾರಿ ನೌಕರರ (ವೈದ್ಯಕೀಯ ಸಹಾಯ) ನಿಯಮಗಳ ಮೇರೆಗೆ [illegible]ಗಳನ್ನು ತುಂಬಿಕೊಡುವುದರ ಬಗ್ಗೆ ಅದರ ಹಕ್ಕುಳ್ಳವರಾಗಿರುವಷ್ಟರ ಮಟ್ಟಿಗೆ [illegible] ಹೊಣೆಗಾರಿಕೆಯನ್ನು ಒಪ್ಪಿಕೊಳ್ಳಬೇಕು.